ಓ ಎಸ್ ನಂ.59/2024

ಪಿ.ಡಬ್ಲ್ಯೂ-3 ಹಣಮಂತ ತಂದೆ ನಾಗಪ್ಪ ಹೊಸಮನಿ @ ಹರಿಜನ

**(ಇಂದು ದಿನಾಂಕಃ 17-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲುಃ ಶ್ರೀ ಪಿ ಎಂ ಕೆ ವಕೀಲರಿಂದ.

ಚಂದ್ರಕಾಂತ ಕುಲಕರ್ಣಿರವರಿಗೆ ಒಬ್ಬರು ಸಹೋದರರು ಇರುತ್ತಾರೆ. ಅವರ ಹೆಸರು ನಾರಾಯಣರಾವ್ ಎಂದು ಇರುತ್ತದೆ. ನಾನು ಯಾವುದೆ ಕೆಲಸ ಮಾಡುವುದಿಲ್ಲ, ಮನೆಯಲ್ಲಿಯೆ ಇರುತ್ತೇನೆ. ಈ ದಿನ ನ್ಯಾಯಾಲಯದಲ್ಲಿರುವ ಮಹಿಳೆಯನ್ನು [ ಪ್ರತಿವಾದಿಯನ್ನು ] ನನಗೆ ಗುರುತಿಸಲು ಆಗುವುದಿಲ್ಲ. ಚಂದ್ರಕಾಂತರವರು ನನ್ನನ್ನು ಊರಿನಲ್ಲಿ ಕರೆದಿದ್ದರು. ಅವರು ನನ್ನನ್ನು ಈ ದಿನ ನ್ಯಾಯಾಲಯಕ್ಕೆ ಮೋಟಾರ ಸೈಕಲ್ ಮೇಲೆ ಕರೆದುಕೊಂಡು ಬಂದಿರುತ್ತಾರೆ. ನಾನು ಬೋರವೆಲ್ ಕುರಿತಾದ ಜಗಳದ ಕುರಿತು ಸಾಕ್ಷ್ಯ ಹೇಳಲು ನ್ಯಾಯಾಲಯಕ್ಕೆ ಬಂದಿರುತ್ತೇನೆ. ನನ್ನ ಹೆಬ್ಬೆಟ್ಟಿನ ಸಹಿ ಪಡೆದ ಕುರಿತು ನನಗೆ ಈಗ ಹೇಳಲು ನೆನಪಿಲ್ಲ. ನನಗೆ ಈಗ ತೋರಿಸಿದ ನಿಪಿ-೧ ರ ಮೃತ್ಯುಪತ್ರವನ್ನು ನಾನು ಈ ಮೊದಲು ನೋಡಿರುವುದಿಲ್ಲ. ನಿಪಿ-೧ ರಲ್ಲಿ ಬರೆದ ವಿಚಾರಗಳು ನನಗೆ ಗೊತ್ತಿಲ್ಲ. ಹೊಲದಲ್ಲಿನ ಮೋಟರ್ ಕುರಿತಾದ ಜಗಳದ ಕುರಿತು ಹೇಳಲು ಚಂದ್ರಕಾಂತರವರು ನನ್ನನ್ನು ಈ ದಿನ ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ. ಸದರಿ ಮೋಟಾರ ಕುರಿತಾದ ಜಗಳವನ್ನು ಬಿಟ್ಟು ನನಗೆ ಬೇರೆ ವಿಚಾರ ಗೊತ್ತಿರುವುದಿಲ್ಲ.

ಮರು ವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.